MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - TUESDAY 6-6-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಮುಂಗಾರು ಮಳೆ ವಿಳಂಬದಿಂದ ಭತ್ತ, ಬೇಳೆಕಾಳು ಬಿತ್ತನೆ ವಿಳಂಬ

ಮೇ ತಿಂಗಳಲ್ಲಿ ಮುಂಗಾರು ಪೂರ್ವ ಮಳೆ ಮಳೆ 10 ಶೇಕಡಾ ಅಧಿಕವಿದ್ದುದರಿಂದ ಕಬ್ಬು, ಹತ್ತಿ ಇತರ ಧಾನ್ಯಗಳ ಬಿತ್ತನೆ ಹಿಂದಿನ ವರ್ಷಕ್ಕಿಂತ ಹೆಚ್ಚಿನ ವೇಗ ಪಡೆದಿದೆಯೆನ್ನಲಾಗಿದೆ. ಆದರೆ ಮುಂಗಾರು ವಿಳಂಬದಿಂದ ಭತ್ತ, ಬೇಳೆಕಾಳು ಹಾಗೂ ತೈಲಬೀಜಗಳ ಬಿತ್ತನೆ ಹಿನ್ನಡೆಯಲ್ಲಿದೆಯೆನ್ನಲಾಗಿದೆ. ಭತ್ತ ಬಿತ್ತನೆ ಹಿಂದಿನ ವರ್ಷದ ಈ ಅವಧಿಯಲ್ಲಿದ್ದ 2.96 ಲಕ್ಷ ಹೆಕ್ಟೇರ್‌ನಿಂದ ಈ ವರ್ಷ 2.17 ಲಕ್ಷ ಹೆಕ್ಟೇರ್ ಗೆ ಇಳಿಕೆಯಾಗಿದೆಯೆನ್ನಲಾಗಿದೆ. ಪ್ರಮುಖ ಭತ್ತ ಬೆಳೆಯುವ ರಾಜ್ಯಗಳಲ್ಲಿ ಬಿತ್ತನೆ ಇನ್ನಷ್ಟೇ ಆರಂಭವಾಗಬೇಕಾಗಿದೆ. ಬೇಳೆಕಾಳು ಹಿಂದಿನ ವರ್ಷದಲ್ಲಿದ್ದ 0.91 ಲಕ್ಷ ಹೆಕ್ಟೇರ್‌ಗಳಿಂದ ಈ ಅವಧಿಯಲ್ಲಿ 0.87 ಲಕ್ಷ ಹೆಕ್ಟೇರ್ ಗಳಿಗೆ ಇಳಿಕೆಯಾಗಿದೆಯೆನ್ನಲಾಗಿದೆ. ಕರ್ನಾಟಕದಲ್ಲಿ 0.63 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೇಳೆಕಾಳು ಬಿತ್ತನೆಯಾಗಿದೆಯೆನ್ನಲಾಗಿದೆ. ತೈಲಬೀಜಗಳ ಬಿತ್ತನೆ ಹಿಂದಿನ ವರ್ಷದ ಈ ಅವಧಿಯ 0.56 ಲಕ್ಷ ಹೆಕ್ಟೇರ್‌ಗಳಿಂದ 0.53 ಲಕ್ಷ ಹೆಕ್ಟೇರ್ ಗಳಿಗೆ ಇಳಿಕೆಯಾಗಿದೆಯೆನ್ನಲಾಗಿದೆ. ಇನ್ನೊಂದು ಮಾಹಿತಿಯ ಪ್ರಕಾರ ಬೇಳೆಕಾಳು ಬಿತ್ತನೆ ಒಟ್ಟು 20.01 ಲಕ್ಷ ಹೆಕ್ಟೇರ್ ಪ್ರದೇಶ ತಲುಪಿದ್ದು ಇದು ಹಿಂದಿನ ವರ್ಷ ಈ ಅವಧಿಯ 19.17 ಲಕ್ಷ ಹೆಕ್ಟೇರ್‌ಗಿಂತ 4.38% ಅಧಿಕವಾಗಿದೆ. ಇದರಲ್ಲಿ ಉದ್ದು 3.26 ಲಕ್ಷ ಹೆಕ್ಟೇರ್ ( ಹಿಂದಿನ ವರ್ಷ 3.25 ಲಕ್ಷ ಹೆಕ್ಟೇರ್), ಹೆಸರುಕಾಳು 16.35 ಲಕ್ಷ ಹೆಕ್ಟೇರ್ ( ಹಿಂದಿನ ವರ್ಷ 15.57 ಲಕ್ಷ ಹೆಕ್ಟೇರ್) ಆಗಿದೆ.

## ಮೇ ತಿಂಗಳ ಪಾಮೆಣ್ಣೆ ಆಮದು 27 ತಿಂಗಳ ಕನಿಷ್ಠ ಮಟ್ಟಕ್ಕೆ

ಮೇ ತಿಂಗಳಲ್ಲಿ ಭಾರತದ ಪಾಮೆಣ್ಣೆ ಆಮದು 27 ತಿಂಗಳ ಕನಿಷ್ಠ ಮಟ್ಟಕ್ಕಿಳಿಯಬಹುದೆಂದು ಹೇಳಲಾಗಿದೆ. ಹಿಂದಿನ ತಿಂಗಳ 510.094 ಟನ್‌ಗಳಿಂದ 441,000 ಟನ್‌ಗಳಿಗೆ ( 16 ಶೇಕಡಾ ಕಡಿಮೆ) ಇಳಿಯುವ ಅಂದಾಜಿದೆಯೆನ್ನಲಾಗಿದೆ.

## ಜಾಗತಿಕ ಕಾಫಿ ದರ ಹೆಚ್ಚಳ

ಜುಲೈ ಅರೆಬಿಕಾ ಕಾಫಿ ICE +2.80 (1.55%) ಹಾಗೂ ರಾಬೆಸ್ಟಾ +32(+1.24%) ದರ ಹೆಚ್ಚಳವಾಗಿದೆ. ಬ್ರೆಜಿಲಿಯನ್ ರಿಯಲ್ ಪ್ರಾಬಲ್ಯ ಹಾಗೂ ಬ್ರೆಜಿಲ್‌ನಲ್ಲಿ ಮಳೆಯಿಂದ ದರ ಹೆಚ್ಚಳವಾಗಿದೆಯೆನ್ನಲಾಗಿದೆ.